**ವಸತಿ ಫಲಾನುಭವಿಗಳ ಆಯ್ಕೆ ಅಧಿಕಾರ ಶಾಸಕರಿಗೆ ನೀಡುವುದು**

**285(246); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)**

ಅ) ರಾಜ್ಯದಲ್ಲಿ ವಸತಿ ಹೀನರಿಗೆ ಮನೆಗಳನ್ನು ನೀಡುವ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಆಯಾ ಕ್ಷೇತ್ರದ ಶಾಸಕರಿಗೆ ವಹಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಎಂದಿನಿಂದ ಜಾರಿಗೆ ತರಲಾಗುವುದು;

ಇ) ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಈಗಿರುವ ಮಾನದಂಡವನ್ನು ಬದಲಾಯಿಸಿ ಪರಿಶಿಷ್ಟ ಜಾತಿ/ಪಂಗಡ ಹೊರತುಪಡಿಸಿ ಉಳಿದ ಸಮುದಾಯದ ಬಡವರಿಗೆ, ವಸತಿ ಹೀನರಿಗೆ ವಿತರಿಸಲು ಕಾನೂನಿನಲ್ಲಿ ಮಾರ್ಪಡಿಸಲಾಗುವುದೇ;

ಈ) ಮಾರ್ಪಾಟು ಮಾಡುವುದಾದಲ್ಲಿ, ಯಾವ ಅನುಪಾತದಲ್ಲಿ ವಸತಿ ರಹಿತರ ಪಟ್ಟಿಯನ್ನು ಆಯ್ಕೆ ಮಾಡಲಾಗುವುದು?

**ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)**

ಅ) ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮಸಭೆಗಳ ಮೂಲಕ ಮತ್ತು ನಗರ ಪ್ರದೇಶದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿನ ಆಶ್ರಯ ಸಮಿತಿಗಳ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆಗೊಳಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ

ಇ) ರಾಜ್ಯ ಸರ್ಕಾರದ ಮೂಲಕ ಅನುಷ್ಠಾನಗೊಳಿಸುತ್ತಿರುವ ವಸತಿ ಯೋಜನೆಗಳಡಿ ಪರಿಶಿಷ್ಟ ಜಾತಿಗೆ ಶೇಕಡ 30% ಪರಿಶಿಷ್ಟ ಪಂಗಡಕ್ಕೆ ಶೇಕಡ 10% ಅಲ್ಪಸಂಖ್ಯಾತರ ವರ್ಗಕ್ಕೆ ಶೇಕಡ 10% ಹಾಗೂ ಸಾಮಾನ್ಯ ವರ್ಗಕ್ಕೆ ಶೇಕಡ 50% ಮೀಸಲಾತಿ ನಿಗದಿಪಡಿಸಲಾಗಿದೆ.

ಈ) ಉದ್ಭವಿಸುವುದಿಲ್ಲ